ಸಾಂತಾ ಬಾರ್ಬರಾ ಕಾನ್ವೆಂಟಿನಲ್ಲಿದ್ದಾಗ ೧೯೪೮, ಜುಲೈಯಲ್ಲಿ ಸೋದರಿ ಲಲಿತಾಗೆ ನ್ಯುಮೋನಿಯಾ ಕಾಣಿಸಿಕೊಂಡಿತು. ಅವರ ಅಂತರಂಗದ ಸ್ತಿಮಿತವನ್ನು ಆಗ ಸ್ಪಷ್ಟವಾಗಿ ಗುರುತಿಸಬಹುದಾಗಿತ್ತು. ಜ್ಞಾನದಾ ಹೀಗೆ ನೆನಪಿಸಿಕೊಳ್ಳುತ್ತಾರೆ: "ಲಲಿತಾ ಯಾವಾಗಲೂ ಮಧುರ ಹಾಗೂ ಆದರ್ಶ ಮಹಿಳೆಯಾಗಿದ್ದರು. ನಾನು ಯಾವಾಗಲೂ ಅವರ ಸೇವೆ ಮಾಡಲು ಇಷ್ಟಪಡುತ್ತಿದ್ದೆ. ಹಾಸಿಗೆ ಹಿಡಿದಿದ್ದರೂ ಡಾಕ್ಟರ್ ಬರುವ ಮೊದಲು ತಮಗೆ ತಲೆಬಾಚಿ ರಿಬ್ಬನ್ ಹಾಕಿರಬೇಕೆಂದು ಅವರು ಹೇಳುತ್ತಿದ್ದರು. ಆದರೆ ಇತರರಿಂದ ಏನನ್ನೂ ಅಪೇಕ್ಷಿಸುತ್ತಿರಲಿಲ್ಲ." ಅವರ ಹಾಸಿಗೆಯ ಬಟ್ಟೆ ಹರಿದಿರುವುದನ್ನು ಕಂಡು ಸೋದರಿಯೊಬ್ಬರು, "ಅದನ್ನು ಬದಲಾಯಿಸಲು ನೀವೇಕೆ ಹೇಳಲಿಲ್ಲ?" ಎಂದು ಕೇಳಿದಾಗ, ಅವರು ವಿನಮ್ರವಾಗಿ ಹೀಗೆ ಹೇಳಿದರು: "ನಾನು ಪೇಟೆಗೆ ಹೋಗಿ ಅದನ್ನು ಕೊಂಡುತರಲು ಆಲೋಚಿಸುತ್ತಿದ್ದೆ."

ಪ್ರಭಾಪ್ರಾಣಾ ಹೇಳುತ್ತಾರೆ, "ತಮ್ಮ ಅಂತ್ಯ ಸಮೀಪಿಸುತ್ತಿದ್ದಾಗ ಲಲಿತಾ, ತಮ್ಮನ್ನು ಈ ಲೋಕದಿಂದ ಹಿಂತೆಗೆದುಕೊಂಡು, ಇನ್ನೊಂದು ಜಗತ್ತನ್ನು ಪ್ರವೇಶಿಸುತ್ತಿದ್ದರು."

ಇನ್ನೊಬ್ಬ ಸೋದರಿ ಹೀಗೆ ಗಮನಿಸುತ್ತಾರೆ: "ಆ ಕೊನೆಯ ದಿನಗಳಲ್ಲಿ ಸ್ವಾಮೀಜಿ ಅವರೊಂದಿಗಿದ್ದಾರೆ ಎಂದು ನಾವು ಗುರುತಿಸಬಹುದಾಗಿತ್ತು. ಕೆಲವೊಮ್ಮೆ ಅವರು ಏನನ್ನೋ ಸ್ಪರ್ಶಿಸುವಂತೆ ಕೈಯಾಡಿಸುತ್ತಿದ್ದರು."

ಅವರ ಅಂತ್ಯಕಾಲಕ್ಕೆ ಕೆಲವು ದಿನಗಳಿರುವಾಗ ಪ್ರಭವಾನಂದರು ಅವರಿಗೆ ಗಂಗಾಜಲವನ್ನು ಕೊಟ್ಟರು. ಹಾಗೂ ಸೋದರಿ ಅವರನ್ನು ಅನುಸರಿಸಿ, ಶ್ರೀರಾಮಕೃಷ್ಣ, ಶ್ರೀಮಾತೆ, ಸ್ವಾಮೀಜಿ, ಮಹಾರಾಜ್ (ಸ್ವಾಮಿ ಬ್ರಹ್ಮಾನಂದಜಿ) ಮತ್ತು ಸ್ವಾಮಿ ತುರೀಯಾನಂದಜಿಯವರ ಹೆಸರುಗಳನ್ನು ಹೇಳಿದರು. ೧೯೪೯, ಜುಲೈ ೨೩ರ ಬೆಳಿಗ್ಗೆ ಜ್ಞಾನದಾ ತಮ್ಮ ಕೋಣೆಯಲ್ಲಿದ್ದರು. ಸೋದರಿಯ ಸಣ್ಣ ನಿಟ್ಟುಸಿರನ್ನು ಕೇಳಿದ ಅವರು ಎದ್ದುಹೋಗಿ ನೋಡುವಂತಾಯಿತು. ಸೋದರಿ ಎಷ್ಟು ಶಾಂತವಾಗಿ ಈ ಜಗತ್ತಿನಲ್ಲಿ ಬದುಕಿದ್ದರೋ, ಅಷ್ಟೇ ಶಾಂತವಾಗಿ ಹೊರಟುಹೋಗಿದ್ದರು.

ಸೋದರಿ ಲಲಿತಾ ಅವರದು ಪ್ರಶಾಂತ ಕಾರ್ಯಶೀಲತೆ! ಯಾರಿಗೆ ಅವರನ್ನು ನೋಡುವ ಅವಕಾಶವಿದ್ದಿತೋ, ಅವರ ಪಾಲಿಗೆ ಎಂತಹ ಮಹಾನ್ ಕಾರ್ಯಶೀಲತೆಯದು!

## ಬದುಕಿಗೊಂದು ಬೆಳಕು

### ಮಾತಿನ ಚಾಟಿ ಏಟು

ಸಿಕ್ಖರ ಮೊದಲ ಗುರುವಾದ ನಾನಕರು ಒಮ್ಮೆ ಬಾಗದಾದ್ ಪಟ್ಟಣಕ್ಕೆ ಹೋದರು. ಅಲ್ಲಿನ ಆಡಳಿತಗಾರ ಅತ್ಯಾಚಾರಿಯೆಂದು ಅವರಿಗೆ ತಿಳಿದುಬಂತು. ಹಾಗೆಯೇ, ಅವನು ಪ್ರಜೆಗಳನ್ನು ಹಿಂಸಿಸುತ್ತಿದ್ದಾನೆಂಬುದೂ ಗೊತ್ತಾಯಿತು. ಇದಲ್ಲದೆ, ಪ್ರಜೆಗಳ ಸ್ವತ್ತನ್ನು ವಶಪಡಿಸಿಕೊಂಡು, ತನ್ನ ಸ್ವಂತ ಸಂಪತ್ತನ್ನು ಹೆಚ್ಚಿಸಿಕೊಳ್ಳುವದರಲ್ಲಿಯೇ ಅವನ ಗಮನವೆಲ್ಲವೂ ಎಂಬುದನ್ನು ಅವರು ಕ್ರಮೇಣ ತಿಳಿದುಕೊಂಡರು.

ಭಾರತದಿಂದ ಒಬ್ಬ ಮಹಾಸಂತರು ಬಂದಿದ್ದಾರೆಂದು ಊರಿನಲ್ಲೆಲ್ಲಾ ವರ್ತಮಾನ ಹರಡಿತು. ಆ ಊರಿನ ಆಡಳಿತಗಾರನೂ ಅವರ ದರ್ಶನ ಮಾಡಲು ಹೋದನು. ಇಬ್ಬರೂ ಪರಸ್ಪರ ಕುಶಲವನ್ನು ವಿಚಾರಿಸಿಕೊಂಡರು.

ಅನಂತರ ನಾನಕರು ಆ ಆಡಳಿತಗಾರನನ್ನು ಹೀಗೆ ಕೇಳಿದರು: "ನನ್ನ ಹತ್ತಿರ ಮೂರು ಕಲ್ಲುಗಳಿವೆ. ಅವನ್ನು ನಿನ್ನ ಬಳಿ ಗಿರವಿ ಇಟ್ಟುಕೊಳ್ಳುವೆಯಾ?" ಇದನ್ನು ಕೇಳಿ ಆಡಳಿತಗಾರನಿಗೆ ಆಶ್ಚರ್ಯವಾಯಿತು. ಇದೇನಿದು? ಕಲ್ಲುಗಳನ್ನು ಗಿರವಿ ಇಟ್ಟುಕೊಳ್ಳುವುದೇ? ಅದೂ ಈ ಸಂತರ ಬಳಿಯಲ್ಲಿರುವ ಕಲ್ಲುಗಳನ್ನು! ಇದರಲ್ಲಿ ಏನೋ ವಿಶೇಷವಿರಬೇಕು ಎಂದು ಅವನು ಯೋಚಿಸಿದನು. "ಆಯಿತು, ಸಂತ ಮಹಾಶಯರೇ, ಅದನ್ನು ತಾವು ಯಾವಾಗ ವಾಪಸ್ಸು ಪಡೆಯುತ್ತೀರಿ?" ಎಂದು ಅವನು ಕೇಳಿದನು. ಅದಕ್ಕೆ ನಾನಕ್ ಹೀಗೆ ಹೇಳುತ್ತಾರೆ: "ಯೋಚನೆ ಮಾಡಬೇಡ. ಮೃತ್ಯುಲೋಕದಲ್ಲಿ ಅದಕ್ಕಾಗಿ ನಾನು ನಿನಗಿಂತ ಮುಂಚೆ ಹೋಗಿ ಕಾಯ್ದುಕೊಂಡಿರುತ್ತೇನೆ. ನಿನಗೂ ಸಾವು ಖಂಡಿತ ಉಂಟಾಗುತ್ತದೆ, ತಾನೆ. ನೀನು ನಂತರ ಹೇಗೂ ಆ ಲೋಕಕ್ಕೇ ಬರುತ್ತೀಯೆ. ಬರುವಾಗ ನನ್ನ ಕಲ್ಲುಗಳನ್ನು ಅಲ್ಲಿಗೇ ತಂದುಕೊಟ್ಟುಬಿಡು." ಆಡಳಿತಗಾರ ದಂಗಾಗಿ ಹೀಗೆ ಹೇಳಿದ: "ಇದು ಹೇಗೆ ಸಾಧ್ಯ? ಈ ಕಲ್ಲುಗಳನ್ನು ಅಲ್ಲಿಗೆ ತಂದುಕೊಡುವುದೇ? ಅದು ಸಾಧ್ಯವಿಲ್ಲದ ಮಾತು. ವಿಚಿತ್ರವಾಗಿದೆಯಲ್ಲ!" ಆಗ ನಾನಕರು ಹೇಳುತ್ತಾರೆ, "ನಾನು ಅಸಾಧ್ಯವಾದುದ್ದೇನೂ ಹೇಳುತ್ತಿಲ್ಲ. ನೀನು ಪ್ರಜೆಗಳ ರಕ್ತವನ್ನು ಹೀರಿ ಅಪಾರ ಸಂಪತ್ತನ್ನು ನಿನ್ನ ಬಳಿ ಕೂಡಿಸಿ ಇಟ್ಟುಕೊಂಡಿದ್ದೀಯೆ. ಆ ಸಂಪತ್ತನ್ನೆಲ್ಲ ಖಂಡಿತ ನೀನು ಮೃತ್ಯುಲೋಕಕ್ಕೆ ತಂದೇ ತರುತ್ತೀಯಲ್ಲವೇ? ಅದರ ಜೊತೆ ಈ ಮೂರು ಕಲ್ಲುಗಳನ್ನು ತರುವುದು ಭಾರವಾಗುವುದಿಲ್ಲ, ತಾನೇ?" ನಾನಕರ ಮಾತು ಚಾಟಿ ಏಟಿನಂತೆ ಆ ಆಡಳಿತಗಾರನಿಗೆ ಚೆನ್ನಾಗಿ ತಟ್ಟಿತು. ಅವನಿಗೆ ತನ್ನ ತಪ್ಪಿನ ಮನವರಿಕೆಯಾಯಿತು. ಇನ್ನು ಮುಂದೆ ಪ್ರಜೆಗಳನ್ನು ಹಿಂಸಿಸುವುದಿಲ್ಲ ಎಂದು ಅವನು ನಾನಕರಿಗೆ ಮಾತುಕೊಟ್ಟನು. ನೋಡಿದಿರಾ, ಸಂತರ ವಾಣಿಯಲ್ಲಿ ಎಷ್ಟು ಮಾಂತ್ರಿಕಶಕ್ತಿ ಇರುತ್ತದೆ ಎನ್ನುವುದನ್ನು!

(ಹಿಂದಿ ಮೂಲ: *ಶರತ್‌ಚಂದ್ರ ಪೆಂಡಾರ್‌ಕರ್,*
ಅನುವಾದ: *ಸಿ.ಎಸ್. ಮಂಗಳಮ್ಮ*)



## ಉಪನಿಷನ್ಮಂಜರಿ

ಕಠೋಪನಿಷತ್ತು ಮೃತ್ಯುವಿನ ರಹಸ್ಯವನ್ನೇ ಭೇದಿಸಹೊರಟ ನಚಿಕೇತನು ಅಮೃತತತ್ತ್ವದ ಹಾದಿಯನ್ನು ಕಂಡುಕೊಂಡ ರೋಚಕ ವೃತ್ತಾಂತ. ಉಪನಿಷತ್ತುಗಳಲ್ಲೆಲ್ಲಾ ಅತಿ ಪ್ರಸಿದ್ಧವಾದ ಇದು ಸ್ವಾಮಿ ವಿವೇಕಾನಂದರಿಗೆ ಅತಿ ಪ್ರಿಯವಾದ ಉಪನಿಷತ್ತು. ಶಕ್ತಿಯ, ಧ್ಯಾನದ, ವಿವೇಕದ ಮಾರ್ಗದರ್ಶನವನ್ನು ನೀಡುವ ಇದು ಆತ್ಮತತ್ತ್ವವನ್ನು ನಿಸ್ಸಂದಿಗ್ಧವಾಗಿ ಬೋಧಿಸುತ್ತದೆ. ಇದರ ಪರಿಚಯವನ್ನು ಗಂಭೀರವಾಗಿ, ಓಜಃಪೂರ್ಣ ಭಾಷೆಯಲ್ಲಿ, ವಿದ್ವತ್ಪೂರ್ಣವಾಗಿ ಮಾಡಿಕೊಟ್ಟಿರುವ ಲೇಖಕರು ಅಲಂಕಾರಶಾಸ್ತ್ರ ಮತ್ತು ಜ್ಯೋತಿಶ್ಶಾಸ್ತ್ರಗಳಲ್ಲಿ ವಿದ್ವಾನ್ ಪದವಿಯನ್ನು ಪಡೆದಿದ್ದಾರೆ. ಪ್ರಸ್ತುತ ಮೈಸೂರಿನ ಕೌಟಿಲ್ಯ ವಿದ್ಯಾಲಯದಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

# ಕಠೋಪನಿಷತ್

**ವಿದ್ವಾನ್ ಗುಹ ವಿಶ್ವನಾಥ**

**ಉಪನಿಷತ್ತುಗಳು:** ನಿತ್ಯನಿರಂತರವೂ ಜ್ಞಾನವಾಹಿನಿಯಲ್ಲೇ ಮುಳುಗೇಳುವ ಜ್ಞಾನಿಗಳ ಬೀಡು ಭಾರತ. ಆರ್ಷಪರಂಪರೆಯ ದಿಟವಾದ, ಗಂಭೀರವಾದ, ಅಗಾಧವಾದ ದೃಷ್ಟಿಕೋನದೊಡನೆ ಬೆಳೆದುಬಂದ ನಾಡು ಭಾರತ. ಇಂತಹ ದೇಶದ ಉದ್ದಗಲಗಳಲ್ಲೂ 'ಭಾರತರು' (ಭಾ+ರತರು) ಕಂಡು ಆಸ್ವಾದಿಸಿ, ತಿಳಿಸಿ, ಬೆಳೆಸಿದ 'ಭಾ' (ಪ್ರಕಾಶವೇ) ನಮ್ಮೆಲ್ಲರ ಹೃದಯಾಂತರಾಳದಲ್ಲಿ ನಿತ್ಯವೂ ಪ್ರಜ್ವಲಿಸುವ ಪರಂಜ್ಯೋತಿಯಾಗಿ ಬೆಳಗುತ್ತಿದೆ.

ಸ್ವಾಮಿ ವಿವೇಕಾನಂದರು ಹೇಳುವಂತೆ, ಯಾವ ಮಹಾಜ್ಯೋತಿಯಿಂದ ಇವೆಲ್ಲವೂ ನಿಂತಿವೆಯೋ, ಅಂತಹ ಮಹಾಜ್ಯೋತಿಯೇ ನಮ್ಮ ದೇಶದ ಬೆನ್ನೆಲುಬು, ಅನಂತವಾದ ಅಪಹರಿಸಲಾಗದ ಸಂಪತ್ತು. ಆ ಮಹಾಜ್ಯೋತಿಯನ್ನು ತಮ್ಮ ಚಿದಾಕಾಶದಲ್ಲಿ ಕಂಡ ಋಷಿಗಳು, 'ವೇತ್ತ' ರಾದರು, ಜ್ಞಾನಿಗಳಾದರು. ಯಾವುದನ್ನರಿತಾಗ ಇನ್ನಾವುದರ ಅರಿವಿನ ಹಂಗಿರುವುದಿಲ್ಲವೋ, ಯಾವುದನ್ನು ಕಂಡಾಗ **ಆವೃತ್ತಚಕ್ಷುಃ ಅಮೃತತ್ವಮಿಚ್ಛನ್** ಎಂಬಂತೆ ಚಕ್ಷುರಿಂದ್ರಿಯವು ಜೀವನದ ಪರಮಾರ್ಥತೆಯನ್ನೇ ಸಾರುತ್ತಾ ಹಿಂದಿರುಗುವುದೋ, ಅಂತಹ ಪರಂಜ್ಯೋತಿಯನ್ನೇ 'ವೇದ' ಎಂದು ಹೇಳಲಾಗುತ್ತದೆ.

ವೇದದಿಂದಲೇ ಶಾಸ್ತ್ರ–ಇತಿಹಾಸ–ಪುರಾಣಗಳು ಹೊರಹೊಮ್ಮಿವೆ. ಪರತತ್ತ್ವದೆಡೆಗೆ ಅಚಲವಾದ ದೃಷ್ಟಿಯನ್ನಿಟ್ಟು ಇಂದ್ರಿಯಸಾರ್ಥಕ್ಯವನ್ನು ಸಾರುವ 'ಕರ್ಮಕಾಂಡ'ವು ಒಂದೆಡೆಯಾದರೆ, ಮತ್ತೊಂದೆಡೆ **'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'** ಎಂದು ಪರಮಾತ್ಮನೇ ಆದೇಶಿಸಿರುವಂತೆ, ಎಲ್ಲಾ ವಿಧವಾದ ಚಟುವಟಿಕೆಗಳನ್ನೂ ತೊರೆದು ಕೇವಲ ಪರಾತ್ಪರತತ್ತ್ವವನ್ನು ಉಪದೇಶಿಸುವ 'ಜ್ಞಾನಕಾಂಡ'ವೂ ವೇದದಲ್ಲಿಯೇ ಅಂತರ್ಗತವಾಗಿದೆ. ಎಲ್ಲೆಡೆಯೂ, ಎಲ್ಲರಲ್ಲೂ, ಎಲ್ಲದರಲ್ಲೂ, ಎಂದೆಂದಿಗೂ ಬೆಳಗುವ ಪರಂಜ್ಯೋತಿಯ ಸ್ವರೂಪಚಿಂತನೆಯನ್ನು ಮಾಡುವ ವೇದಗಳ ಸಾರಭೂಯಿಷ್ಠವಾದ ಭಾಗವೇ "ಉಪನಿಷತ್ತು"ಗಳು.

ಮಹಾಕವಿ ಕಾಳಿದಾಸನು **ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ ತನುತ್ಯಜಾಮ್** –"ಮುಪ್ಪಿನಲ್ಲಿ ಮುನಿಧರ್ಮವನ್ನು ಅನುಸರಿಸಿ, ಯೋಗಸಾಧನೆಯನ್ನು ಮಾಡಿ, ಕೊನೆಗೆ ದೇಹವನ್ನು ತ್ಯಜಿಸುವಂಥವರು" ಎಂದು ಒಂದು ಕಡೆ ಹೇಳುತ್ತಾನೆ. ಪರಂಜ್ಯೋತಿಯಲ್ಲಿ ಲೀನವಾಗಬೇಕಾದರೆ ಮನಸ್ಸು ಮೌನವಾಗಬೇಕಾಗುತ್ತದೆ. ಆ ರೀತಿಯ ಮೌನವಾದ ಮನಸ್ಸುಳ್ಳವನಿಗೆ ತನ್ನೊಳಗೆ ಬೆಳಗುವ ಪರಂಜ್ಯೋತಿಯು ಕಾಣುತ್ತದೆ. ಲೌಕಿಕ ಬಂಧನಗಳನ್ನು ಕಳಚಿಕೊಂಡ ಮತ್ತು ಕಳಚಲು ನಿಶ್ಚಯಿಸಿದ ನಂತರದ ಮಾರ್ಗವನ್ನು ಉಪನಿಷತ್ತುಗಳು ಉಪದೇಶಿಸುತ್ತವೆ. ಶ್ರೀಶಂಕರರು ಹೀಗೆ ಆದೇಶಿಸಿದ್ದಾರೆ: **ಮೋಕ್ಷಾರ್ಥಂ ಕುರು ಚಿತ್ತವೃತ್ತಿಮಖಿಲಾಮ್ ಅನ್ಯೈಸ್ತು ಕಿಂ ಕರ್ಮಭಿಃ** – "ನಿನ್ನ ಮನಸ್ಸಿನ ವೃತ್ತಿಗಳೆಲ್ಲವನ್ನೂ ಮೋಕ್ಷಲಾಭಕ್ಕಾಗಿಯೇ ತೊಡಗಿಸಿರಿ. ಅನ್ಯಕರ್ಮಗಳಿಂದ ಏನು ತಾನೇ ಪ್ರಯೋಜನ?" ಹೀಗೆ ಮೋಕ್ಷವನ್ನು ಮಾತ್ರವೇ ಬಯಸುವವರಿಗೆ ಮೋಕ್ಷದ ಸೋಪಾನದಂತೆ ಇರುವುದೇ ಉಪನಿಷತ್ತುಗಳು; ಜೀವ ಪರಮಾತ್ಮರ ಸ್ವರೂಪ ಹಾಗೂ ಸಂಬಂಧದ ವಿಶ್ಲೇಷಣೆಯೇ ಉಪನಿಷತ್ತುಗಳ ಹೃದಯ.

ಋಷಿಗಳ ಅನುಭವವೇ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗುವ ವಿಷಯಗಳಿಗೆ ಪ್ರಮಾಣ. ಪರಮಾತ್ಮತತ್ತ್ವವನ್ನು ಸ್ವಾನುಭವವನ್ನು ಹೊರತುಪಡಿಸಿ ಇನ್ನಾವ ಪ್ರಮಾಣಗಳಿಂದಲೂ ತಿಳಿಯಲಾಗದು. ಇಂತಹ ಅನುಭವೈಕವೇದ್ಯವಾದ ವಿಷಯಗಳನ್ನು ಲೋಕೋಪಕಾರಚೇತಸ್ಕರಾದ ಋಷಿಗಳು 'ಉಪನಿಷತ್ತು'ಗಳೆಂಬ ಶೀರ್ಷಿಕೆಯಲ್ಲಿ ಲೋಕಾರ್ಪಣ ಮಾಡಿರುವರು. ಪ್ರಧಾನವಾಗಿ ಉಪನಿಷತ್ತುಗಳು ಹತ್ತು. ಅವುಗಳಲ್ಲಿ ಕಠೋಪನಿಷತ್ತೂ ಒಂದು.

**ಕಠೋಪನಿಷತ್ತು :** ನಚಿಕೇತನ ಜಿಜ್ಞಾಸೆಯಿಂದ ಆರಂಭವಾಗುವ ಈ ಉಪನಿಷತ್ತು, ಸಾಕ್ಷಾತ್ ಮೃತ್ಯುವಿನ ಅಧಿದೇವತೆಯಾದ ಯಮಧರ್ಮರಾಯನು ನೀಡುವ ನಿಖರವಾದ, ನಿಶ್ಚಲವಾದ, ಆಳವಾದ, ಸಮಗ್ರವಾದ ಆತ್ಮನಿರೂಪಣೆಯನ್ನು ಹೊಂದಿರುತ್ತದೆ. ಸುಲಭವಾದ, ಸರಳವಾದ, ಆಬಾಲವೃದ್ಧವೇದ್ಯವಾದ ಭಾಷಾಸರಣಿ ಕಠೋಪನಿಷತ್ತಿನ ಪ್ರಮುಖಾಂಶ. ಮೂರು ವಲ್ಲಿಗಳನ್ನೊಳಗೊಂಡ, ಎರಡು ಅಧ್ಯಾಯಗಳಿಂದ ಕೂಡಿರುವ ಮಹಾವೃಕ್ಷ ಕಠೋಪನಿಷತ್ತು. ಸಾಹಿತ್ಯ, ಸೌಂದರ್ಯೋಪಾಸಕರಿಗೂ, ಆತ್ಮಸೌಂದರ್ಯೋಪಾಸಕರಿಗೂ ಏಕಕಾಲದಲ್ಲಿ ಮುದವನ್ನೀಯುವ ಉಪನಿಷಜ್ಜ್ಯೋತ್ಸ್ನಾ; ಆತ್ಮಪಿಪಾಸುಗಳಿಗೆ ಅಮೃತಸ್ಯಂದಿನಿ; ಆತ್ಮಸೋಪಾನವನ್ನೇರಲು ಬಯಸುವವನ ಕೈಪಿಡಿ; ಆತ್ಮಸಾಕ್ಷಾತ್ಕಾರೇಚ್ಛುಕರ ಮಹಾಗುರು; ಆತ್ಮತತ್ತ್ವ ಸುವಾಸನೆಯನ್ನು ಎಲ್ಲೆಡೆ ಸೂಸುವ ಆತ್ಮಗಂಧವಾಹ; ಆತ್ಮಸುಧೆಯನ್ನು ಹರಿಸುವ ಆತ್ಮಚಂದ್ರಮಸ.



**ಪ್ರಮುಖ ವಿಷಯಗಳು:** ದಾನದ ಹೆಸರಿನಲ್ಲಿ ಮುದಿಹಸುಗಳನ್ನು ವಾಜಶ್ರವನು ಕೊಡುತ್ತಿದ್ದ. ಆತನ ಮಗನಾದ ಬಾಲಕ ನಚಿಕೇತನು, ಅದು ಅಧರ್ಮ, ಅಶ್ರೇಯಸ್ಕರ ಎಂದು ತಿಳಿದು, "ನನ್ನನ್ನು ಯಾರಿಗೆ ದಾನ ಮಾಡುವೆ?" ಎಂದು ಪದೇ ಪದೇ ಕೇಳಿದನು. ತನ್ನ ತಂದೆಗೆ ಒದಗಬಹುದಾದ ಕೆಡುಕನ್ನು ತನ್ನ ದಾನದಿಂದ ನಿವಾರಿಸಬಹುದು ಎಂಬುದು ನಚಿಕೇತನ ಆಶಯವಾಗಿತ್ತು. ದಾನದಿಂದ ಪಡೆಯಲಾಗದ ಲೋಕಗಳಿಲ್ಲ, ಧರ್ಮವಿಲ್ಲ. ಆದ್ದರಿಂದ, ದಾನವು ಧರ್ಮಬದ್ಧವೂ ಶುದ್ಧವೂ, ಲೋಭರಹಿತವೂ ಆಗಿರಬೇಕು. ಆದ್ದರಿಂದ ನಚಿಕೇತನು ತನ್ನ ತಂದೆಗೆ ಬರುತ್ತಿದ್ದಂತಹ ಆಪತ್ತನ್ನು ಸ್ವತಃ ತನ್ನ ದಾನದ ಮೂಲಕ ಪರಿಹರಿಸಬಯಸಿದನು. ಕೋಪದಿಂದ ವಾಜಶ್ರವನು, **'ಮೃತ್ಯವೇ ತ್ವಾ ದದಾಮಿ'** – "ಮೃತ್ಯುವಿಗೆ ನಿನ್ನನ್ನು ಕೊಡುತ್ತೇನೆ" ಎಂದು ಹೇಳುತ್ತಾನೆ. ತಂದೆಯ ಮಾತನ್ನು ಗೌರವಿಸುತ್ತಾ, ಅದೇ ಕರ್ತವ್ಯವೆಂದು ಭಾವಿಸಿ ನಚಿಕೇತನು ಯಮನ ಬಳಿಗೆ ಹೋಗುತ್ತಾನೆ. ಅಲ್ಲಿ ಯಮನಿರುವುದಿಲ್ಲ. ನಚಿಕೇತ ಮೂರು ದಿನಗಳ ಪರ್ಯಂತ, ಅನ್ನಾಹಾರಗಳಿಲ್ಲದೆ ಯಮನ ಬರುವಿಕೆಗಾಗಿ ಕಾಯುತ್ತಾನೆ. ಅಗ್ನಿಸ್ವರೂಪದಲ್ಲಿರುವ ಅತಿಥಿಯು ಇಷ್ಟಾಪೂರ್ತಗಳನ್ನೂ, ಪಶ್ವಾದಿಸಕಲಸಂಪತ್ತನ್ನೂ ಕರುಣಿಸುತ್ತಾನೆ. ನಚಿಕೇತನು ಅತಿಥಿಯಾಗಿ ಬಂದು ಮೂರು ದಿನ ಅನ್ನಾಹಾರಗಳಿಲ್ಲದೆ ಇದ್ದ ವಿಷಯವು, ಹಿಂದಿರುಗಿ ಬಂದ ಯಮನಿಗೆ ತಿಳಿಯುತ್ತದೆ. ಅತಿಥಿಯ ಅನಾದಾರದಿಂದ ತನಗೆ ಒದಗಬಹುದಾದ ಅಪಕೀರ್ತಿಯನ್ನು ನಿವಾರಿಸಲೋಸುಗ ಯಮನು ನಚಿಕೇತನಿಗೆ ಮೂರು ವರಗಳನ್ನು ಕೊಡುತ್ತಾನೆ.

**ಮೂರು ವರಗಳು:** ಮೊಟ್ಟಮೊದಲನೆಯದಾಗಿ, ವಾಜಶ್ರವನು 'ಶಾಂತಸಂಕಲ್ಪ' ನಾಗಬೇಕೆಂದು ನಚಿಕೇತನು ಕೇಳಿಕೊಳ್ಳುತ್ತಾನೆ. ಕರ್ಮಾಚರಣೆಯನ್ನು ವಿರೋಧಿಸುವುದಕ್ಕಾಗಿ ನಚಿಕೇತನು ಈ ರೀತಿಯಾಗಿ ಕೇಳುವುದಿಲ್ಲ. **'ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ'** ಎಂಬ ಗೀತೋಕ್ತಿಯಂತೆ ಎಲ್ಲ ಬಗೆಯ ಕರ್ಮಗಳೂ ಜ್ಞಾನದಲ್ಲಿಯೇ ನೆಲೆನಿಲ್ಲುತ್ತವೆ. ಅಧಿಕವಾದ ಹೊಸ ಹೊಸ ಕರ್ಮಗಳನ್ನು ಆಚರಿಸಬೇಕೆಂಬ ಹಂಬಲವು ಮನುಷ್ಯನನ್ನು ಕರ್ಮಬಂಧನದಲ್ಲಿ ಸಿಲುಕುವಂತೆ ಮಾಡುತ್ತದೆ. ತನ್ನ ತಂದೆಯು ಸಾಂಸಾರಿಕ ಕರ್ಮವಾಸನೆಯಿಂದ ಮುಕ್ತನಾಗಿ ಪರಬ್ರಹ್ಮದೆಡೆಗೆ ಸಾಗಲಿ ಎಂಬ ಉದ್ದೇಶದಿಂದ ನಚಿಕೇತನು ಯಮನ ಬಳಿ ಈ ವರವನ್ನು ಕೇಳುತ್ತಾನೆ. ಹಾಗೆಯೇ ತನ್ನ ತಂದೆಯ ಮನಸ್ಸು ಉದ್ವೇಗಮುಕ್ತವಾಗಿ, ತನ್ನ ಮೇಲಿನ ಕ್ರೋಧವೂ ಇಂಗಿ, ತಾನು ಮರಳಿ ಮನೆಗೆ ಹೋದಾಗ ತಂದೆಯು ತನ್ನನ್ನು ಪ್ರಶಾಂತವಾದ ಮನಸ್ಸಿನಿಂದ ಎದುರುಗೊಳ್ಳಲೆಂದು ಕೇಳಿಕೊಳ್ಳುತ್ತಾನೆ. ಯಮನೂ ಹಾಗೇ ಆಗಲೆಂದು ಹಾರೈಸುತ್ತಾನೆ.

**ಎರಡನೆಯ ವರ:** ಎರಡನೆಯ ವರವಾಗಿ, ಶೋಕ–ಭಯ–ನೀರಡಿಕೆ–ಹಸಿವು ಇವಾವುವೂ ಇಲ್ಲದ ಸ್ವರ್ಗಲೋಕದಲ್ಲಿ ಬೆಳಗುವ ಅಗ್ನಿಯ ವಿಷಯವನ್ನು ತಿಳಿಸಿಕೊಡಬೇಕೆಂದು ನಚಿಕೇತನು ಕೇಳಿಕೊಳ್ಳುತ್ತಾನೆ. ಯಮನು ಆ ವಿದ್ಯೆಯನ್ನು ನಚಿಕೇತನಿಗೆ ಉಪದೇಶಿಸುತ್ತಾನೆ. ನಚಿಕೇತನು ಅದನ್ನು ತಾನು ತಿಳಿಸಿದಂತೆಯೇ ಯಥಾವತ್ತಾಗಿ ತಿಳಿದುಕೊಂಡುದು ಯಮನಿಗೆ ಅತೀವ ಸಂತೋಷವನ್ನು ಉಂಟುಮಾಡುತ್ತದೆ. ಆದುದರಿಂದ ಅವನು ಈ ಅಗ್ನಿರಹಸ್ಯವು 'ನಾಚಿಕೇತಾಗ್ನಿ' ಎಂದು ಲೋಕದಲ್ಲಿ ಪ್ರಸಿದ್ಧವಾಗಲೆಂದು ಹಾರೈಸುತ್ತಾನೆ. ಈ ನಾಚಿಕೇತಾಗ್ನಿಯನ್ನು ಬಲ್ಲವರು ಜನನ–ಮರಣಗಳನ್ನು ದಾಟಿ, ಪರಬ್ರಹ್ಮವನ್ನು ಅರಿಯುತ್ತಾರೆ.

**ಮೂರನೆಯ ವರ :** ಮೂರನೆಯ ವರವಾಗಿ ನಚಿಕೇತನು ಯಮನನ್ನು, "ಮನುಷ್ಯನು ಮೃತನಾದ ನಂತರ ಇರುವನೋ